**ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಕನಕಪುರ**

ಉಪಸ್ಥಿತರು : ಶ್ರೀಮತಿ. ಸವಿತಾ ರುದ್ರಗೌಡ ಚಿಕ್ಕಣ್ಣಗೌಡರ್
ಬಿ.ಎ. ಎಲ್.ಎಲ್.ಬಿ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ಕನಕಪುರ.

**ಸಿ.ಸಿ ಸಂಖ್ಯೆ ಃ 1453/2022**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕನಕಪುರ
ಗ್ರಾಮಾಂತರ ಪೊಲೀಸ್ ಠಾಣೆ.
ಕನಕಪುರ.

– ವಿರುದ್ಧ –

ಆರೋಪಿತ ಃ ನಂದೀಶ.ಬಿ.ಪಿ

**ದೋಷಾರೋಪಣೆ**

ಶ್ರೀಮತಿ. ಸವಿತಾ ರುದ್ರಗೌಡ ಚಿಕ್ಕಣ್ಣಗೌಡರ್, ಬಿ.ಎ. ಎಲ್.ಎಲ್.ಬಿ., ಎರಡನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ನಾನು, ಆರೋಪಿತರಾದ**:**

| | | |
|---|---|---|
| ಆರೋಪಿ | | ನಂದೀಶ.ಬಿ.ಪಿ ಬಿನ್ ಪುಟ್ಟಣ್ಣ,<br>ವಯಸ್ಸು 34 ವರ್ಷಗಳು,<br>ವಾಸಃ ಟಿ. ಬೇಕುಪ್ಪೆ ಗ್ರಾಮ,<br>ಕಸಬಾ ಹೋಬಳಿ,<br>ಕನಕಪುರ ತಾಲ್ಲೂಕು,<br>ರಾಮನಗರ ಜಿಲ್ಲೆ. |

**ನಿಮ್ಮ ವಿರುದ್ಧ ರೂಪಿಸುವ ದೋಷಾರೋಪಣೆ ಏನೆಂದರೆ -**

ಕನಕಪುರ ಗ್ರಾಮಾಂತರ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಜೋಗಮಾನಹೊಸಳ್ಳಿ-ನಿಡಗಲ್ಲು ರಸ್ತೆಯಲ್ಲಿರುವ ಹೊನ್ನೇಗೌಡ ರವರ ಜಮೀನಿನ ಬಳಿ ದಿನಾಂಕ 28.08.2021 ರಂದು ರಾತ್ರಿ 09.30 ಗಂಟೆ ಸಮಯದಲ್ಲಿ ಚಾಸಾ-1/ಶ್ರೀನಿವಾಸ, ಚಾಸಾ-2/ಶಿವಕುಮಾರ ಮತ್ತು ಚಾಸಾ-3/ಸುದೀಪ ರವರುಗಳು ಜಮೀನಿನ ವಿಚಾರದ ಬಗ್ಗೆ ಮಾತನಾಡುತ್ತಾ ನಿಂತಿದ್ದಾಗ ಆರೋಪಿಯಾದ ನೀವು ಮೋಟಾರ್ ಸೈಕಲ್ ನಲ್ಲಿ ಬಂದು ಚಾಸಾ-1ರವರಿಗೆ ಯಾಕೆ ಇಲ್ಲಿ ನಿಂತಿದ್ದಿರಾ ಎಂದು ಕೇಳಿದಾಗ ಚಾಸಾ-1ರವರು ಏನೋ ಸ್ವಲ್ಪ ಮಾತನಾಡುವುದಿದೆ ಅದಕ್ಕೆ ನಿಂತಿದ್ದೀವಿ ಎಂದು ಹೇಳಿದಾಗ ಆರೋಪಿಯಾದ ನೀವು ಚಾಸಾ-1ರವರ ಮೇಲಿನ ಹಳೆಯ ದ್ವೇಷದಿಂದ ಕೈನಿಂದ ಎದೆಯ ಮೇಲೆ ಮತ್ತು ಹೊಟ್ಟೆಗೆ ಹೊಡೆದಿದ್ದು, ಆಗ ಚಾಸಾ-2 ಮತ್ತು 3ರವರು ಜಗಳ ಬಿಡಿಸಲು ಬಂದಾಗ ಆರೋಪಿಯಾದ ನೀವು ಚಾಸಾ-2ರವರಿಗೆ ಬೆನ್ನಿನ ಮೇಲೆ ಹೊಡೆದು ಮತ್ತು

ಚಾಸಾ-3ರವರಿಗೆ ಎದೆಯ ಮೇಲೆ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ರಕ್ತಗಾಯಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.323 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞಾದಲ್ಲಿ ಎಸಗಿರುವಿರಿ.

**ಎರಡನೇಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀವು ಚಾಸಾ-1 ರಿಂದ 3 ರವರಿಗೆ ಟಿ.ಬೇಕುಪ್ಪೆ ಗೇಟ್ ಕಡೆಗೆ ಬನ್ನಿ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಪ್ರಾಣ ಬೆದರಿಕೆ ಹಾಕಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.506 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞಾದಲ್ಲಿ ಎಸಗಿರುವಿರಿ.

**ಮೂರನೇಯದಾಗಿಃ** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನಿಮ್ಮಿಂದ ಜಗಳದ ಸಮಯದಲ್ಲಿ ಚಾಸಾ-2ರವರ ಕತ್ತಿನಲ್ಲಿದ್ದ 26 ಗ್ರಾಂ ಚಿನ್ನದ ಚೈನ್ ಕಳೆದು ಹೋಗಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.425 ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞಾದಲ್ಲಿ ಎಸಗಿರುವಿರಿ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 08.10.2024ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕನಕಪುರ.

**<u>ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ</u>**

**<u>ಸಿ.ಸಿ. ನಂಃ 1453/2022</u>**

ಪಿರ್ಯಾದುದಾರರು : ಕನಕಪುರ ಗ್ರಾಮಾಂತರ ಪೊಲೀಸ್ ಠಾಣೆ.

– ವಿರುದ್ಧ –

ಆರೋಪಿ ಃ ನಂದೀಶ.ಬಿ.ಪಿ

**: <u>ಆಪಾದನೆ</u> :**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಆರೋಪಿಯ ಉತ್ತರಃ

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಆರೋಪಿಯ ಉತ್ತರಃ

ಮೇಲಿನ ಹೇಳಿಕೆಯನ್ನು ಆಪಾದಿತನಿಗೆ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಡಿಕರಿಸುತ್ತೇನೆ.

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಕನಕಪುರ.

ಆರೋಪಿಯ ಸಹಿ